ನನ್ನ ಬದುಕನ್ನು ಹಂಚಿಕೊಂಡ ವ್ಯಕ್ತಿಗೆ ಬರೆದದ್ದನ್ನು ಯಾವಾಗಲೂ ಓದುತ್ತೇನೆ. ಆ ವ್ಯಕ್ತಿ ಇನ್ನೂ ಓದು ಅಂತಲೋ, ಇವತ್ತೇನು ಬರೆದೆ ಅಂತಲೋ ಕೇಳಿದರೆ ನನಗೆ ಬಹಳ ಖುಷಿಯಾಗುತ್ತದೆ. ಅದು ಸ್ವಲ್ಪ ಮಟ್ಟಿಗೆ ಒತ್ತಡವನ್ನು ಉಂಟುಮಾಡಿದರೂ ಅದೊಂದು ರೀತಿಯಲ್ಲಿ ಅಪ್ಪನೋ ಅಮ್ಮನೋ ಬೆನ್ನುತಟ್ಟಿ ಪ್ರೋತ್ಸಾಹಿಸಿದ ರೀತಿಯಲ್ಲಿರುತ್ತದೆ. ನನಗದು ಇಷ್ಟ.

ನನ್ನ ರೋಲ್ ಮಾಡಲ್ ಎಂದುಕೊಳ್ಳುವ ಥಾಮಸ್ ಮನ್ ಯಾವಾಗಲೂ ನೆನಪಾಗುತ್ತಾನೆ. ಅವನು ತನ್ನ ಇಡೀ ಕುಟುಂಬವನ್ನು, ಅಂದರೆ ಆರು ಜನ ಮಕ್ಕಳು ಮತ್ತು ಹೆಂಡತಿಯನ್ನು ಒಟ್ಟಿಗೆ ಕೂರಿಸಿಕೊಂಡು ಓದುತ್ತಿದ್ದನಂತೆ. ಅಪ್ಪ ಕತೆ ಹೇಳುವುದು ನನಗಿಷ್ಟ.

◆ ನಿಮ್ಮ ಹದಿಹರೆಯದಲ್ಲಿ ನೀವು ಚಿತ್ರಕಾರನಾಗಬೇಕು ಅಂದುಕೊಂಡಿದ್ದಿರಿ. ಚಿತ್ರಕಲೆಯಿಂದ ನಿಮ್ಮ ಒಲವು ಬರವಣಿಗೆಯ ಕಡೆಗೆ ಯಾವಾಗ ಬದಲಾಯಿತು?

ಇಪ್ಪತ್ತೆರಡನೆಯ ವಯಸ್ಸಿನಲ್ಲಿ. ಏಳು ವರ್ಷದವನಾಗಿದ್ದಾಗಿನಿಂದ ಚಿತ್ರಕಾರನಾಗಬೇಕೆಂದು ಕೊಂಡಿದ್ದೆ. ನನ್ನ ಮನೆಯವರು ಒಪ್ಪಿಕೊಂಡಿದ್ದರು. ಬಹಳ ಪ್ರಸಿದ್ಧ ಚಿತ್ರಕಾರನಾಗುತ್ತೇನೆ ಅಂದುಕೊಂಡಿದ್ದರು. ಆಮೇಲೆ ನನಗ್ಯಾಕೋ ಸ್ಕ್ರೂ ಲೂಸಾಗಿದೆ ಅನ್ನಿಸಿ ಚಿತ್ರ ಬರೆಯುವುದನ್ನು ಬಿಟ್ಟೆ. ನನ್ನ ಮೊದಲ ಕಾದಂಬರಿಯನ್ನು ಬರೆಯಲು ಶುರುಮಾಡಿದೆ.

◆ ಸ್ಕ್ರೂ ಲೂಸ್ ಅಂದರೆ?

ಅದಕ್ಕೆ ಕಾರಣಗಳೇನು ಅಂತ ಹೇಳಲಾರೆ. ಇತ್ತೀಚೆಗೆ 'ಇಸ್ತಾಂಬುಲ್' ಎನ್ನುವ ಪುಸ್ತಕ ಪ್ರಕಟಿಸಿದೆ. ಅದರಲ್ಲಿ ಅರ್ಧಭಾಗ ನನ್ನ ಆತ್ಮಚರಿತ್ರೆ, ಉಳಿದರ್ಧ ಇಸ್ತಾಂಬುಲ್ ಕುರಿತ ಪ್ರಬಂಧವಿದೆ. ಮಗುವಿನ ಕಣ್ಣಲ್ಲಿ ಇಸ್ತಾಂಬುಲ್ ಅಂತ ಹೇಳಬಹುದು. ಆ ನಗರದ ಚಿತ್ರಗಳು, ಭೂದೃಶ್ಯಗಳು, ಸ್ವರೂಪ ಇವುಗಳ ಕುರಿತ ಆಲೋಚನೆ, ಮಗುವಿಗೆ ಆ ನಗರ ಹೇಗೆ ಕಂಡಿತು ಎನ್ನುವುದು ಹಾಗೂ ಆ ಮಗುವಿನ ಆತ್ಮಚರಿತ್ರೆ ಎರಡೂ ಅದರಲ್ಲಿದೆ. ಆ ಪುಸ್ತಕದ ಕೊನೆಯ ವಾಕ್ಯ 'ನಾನು ಕಲಾವಿದನಾಗುವುದಿಲ್ಲ ಬರಹಗಾರನಾಗುತ್ತೇನೆ'. ಇದರ ಬಗ್ಗೆ ವಿವರಣೆಯಿಲ್ಲ. ಇಡೀ ಪುಸ್ತಕವನ್ನು ಓದಿದಾಗ ಏನಾದರೂ ವಿವರಣೆ ಸಿಗಬಹುದು.

◆ ನಿಮ್ಮ ನಿರ್ಧಾರವನ್ನು ಮನೆಯವರು ಒಪ್ಪಿಕೊಂಡರೇ?

ನಮ್ಮಮ್ಮನಿಗೆ ಬಹಳ ಬೇಜಾರಾಯಿತು. ನಮ್ಮಪ್ಪ ಅರ್ಥಮಾಡಿಕೊಂಡರು. ಯಾಕೆಂದರೆ, ಅವರು ತಮ್ಮ ಯೌವನದ ದಿನಗಳಲ್ಲಿ ಕವಿಯಾಗಬೇಕೆಂದುಕೊಂಡಿದ್ದರು. ವಲೆರಿಯನ್ನು ಟರ್ಕಿಶ್ ಭಾಷೆಗೆ ಅನುವಾದಿಸಿದ್ದರು. ಆದರೆ, ಅವರ ಸುತ್ತಲಿನ ಮೇಲ್ವರ್ಗದ ಜನ ತಮಾಷೆ ಮಾಡಿದ್ದಕ್ಕೆ ಬಿಟ್ಟುಬಿಟ್ಟರು.

◆ ನಿಮ್ಮ ಮನೆಯವರು ನೀವು ಚಿತ್ರಕಾರನಾಗಲು ಒಪ್ಪಿದರು, ಆದರೆ ಕಾದಂಬರಿಕಾರನಾಗಲು ಒಪ್ಪಲಿಲ್ಲ.

ಹೌದು. ಅವರು ನಾನು ಪೂರ್ಣವಾಗಿ ಚಿತ್ರಕಲೆಯಲ್ಲಿಯೇ ತೊಡಗಿಕೊಳ್ಳುತ್ತೇನೆ ಅಂದುಕೊಂಡಿರಲಿಲ್ಲ. ನಮ್ಮ ಮನೆಯಲ್ಲಿ ಎಲ್ಲರೂ ಸಿವಿಲ್ ಎಂಜಿನಿಯರ್‌ಗಳು. ನನ್ನ ತಾತ ಸಿವಿಲ್ ಎಂಜಿನಿಯರ್. ರೈಲ್ವೇ ರಸ್ತೆಗಳನ್ನು ಮಾಡಿ ಸಾಕಷ್ಟು ಹಣ ಗಳಿಸಿದ. ನನ್ನ ದೊಡ್ಡಪ್ಪ, ಚಿಕ್ಕಪ್ಪ ಮತ್ತು ಅಪ್ಪ ಹಣ ಕಳೆದುಕೊಂಡರು. ಅವರೆಲ್ಲರೂ ಇಸ್ತಾಂಬುಲ್‌ನ ಟೆಕ್ನಿಕಲ್ ಯೂನಿವರ್ಸಿಟಿಯಲ್ಲಿ